ಬೇಕು. ಆಕಾಂಕ್ಷಿಗಳಾಗಿ ಬರುವವರ ಮನಸ್ಸಿನಲ್ಲಿ ಏನಿದೆ, ಅವರು ಏನನ್ನು ಸಾಧಿಸುವ ಎಂದು ಊಹಿಸುವ ಅನುಭವ ಮುಖ್ಯ ಪಾತ್ರ ವಹಿಸುತ್ತದೆ.

ಡರ್ಮಲ್ ಫಿಲ್ಲರ್ ಗಳಲ್ಲಿ ಸಾಮಾನ್ಯವಾಗಿ ನೋವು ನಿವಾರಕ ಸ್ಥಳೀಯವಾಗಿ ಮಾತ್ರ ಕೆಲಸ ಮಾಡಬಲ್ಲ ಅರಿವಳಿಕೆಯನ್ನು ಕೂಡ ಮಿಶ್ರಗೊಳಿಸಿರುತ್ತಾರೆ. ಈ ಕಾರಣ ಡರ್ಮಲ್ ಫಿಲ್ಲರ್ ಒಳಸೇರಿದ ನಂತರ ಯಾವ ನೋವೂ ಇರುವುದಿಲ್ಲ.

ಸಣ್ಣ ಸಣ್ಣ ಉಂಡೆಗಳಂತೆ/ಮಣಿಗಳಂತೆ ಒಳಸೇರುವ ಡರ್ಮಲ್ ಫಿಲ್ಲರ್ ಬೇಕಾದ ಆಕಾರಕ್ಕೆ ತಕ್ಕಂತೆ ತುಟಿಗಳನ್ನು ಮಸಾಜು ಮಾಡಿ ಒಡೆದು ನಯ ಮಾಡಲಾಗುತ್ತದೆ. ತುಟಿಗಳಿಗೆ ವ್ಯಾಸೆಲೈನ್ ಹಚ್ಚಿ ಹದಗೊಳಿಸಲಾಗುತ್ತದೆ.

## ಚಿಕಿತ್ಸೆಯ ನಂತರ..

ಚಿಕಿತ್ಸೆಯ ನಂತರ ವಾಸ್ತವಕ್ಕಿಂತ ತುಟಿ ದಪ್ಪವಾದಂತೆನ್ನಿಸುವುದು, ಸ್ವಲ್ಪ ಕೆಂಪಗಾಗುವುದು ಇತ್ಯಾದಿ ಆಗಬಹುದು. ಆಗದೆಯೂ ಇರಬಹುದು. ಲೋಕಲ್ ಅನಸ್ತೀಸಿಯಾ ಇರುವ ಕಾರಣ ಹಲವಾರು ಗಂಟೆಗಳ ಕಾಲ ಕಾಫಿ, ಟೀ, ಇತರೆ ಬಿಸಿ ಪಾನೀಯಗಳನ್ನು ಕುಡಿಯದಂತೆ ಎಚ್ಚರಿಕೆ ವಹಿಸಬೇಕು. ಏಕೆಂದರೆ ತುಟಿ ಸುಟ್ಟರೂ ಅರಿವಾಗದಿರಬಹುದು. ಹಾಗೆಯೇ ತುಟಿಗಳಲ್ಲಿ ಇರುವ ದಟ್ಟ ರಕ್ತ ಸರಬರಾಜು ಇಂಜೆಕ್ಷನ್ ನೀಡಿದೆಡೆ ಹೆಚ್ಚು ಕಾಲ ಬ್ಲೀಡ್ ಆಗದಿರಲು ಇದು ಸಹಕಾರಿ.

ಇದೇ ಕಾರಣಕ್ಕೆ ವ್ಯಾಯಾಮ ಮತ್ತು ಅತಿ ಬಿಸಿಲಿನ ಒತ್ತಡಕ್ಕೆ ಸಿಲುಕದಂತೆ ಕೂಡ ಎಚ್ಚರ ವಹಿಸುವುದು ಉತ್ತಮ. ಮರುದಿನ ಎಂದಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಯಾವ ಅಡ್ಡಿಯೂ ಇಲ್ಲ.

## ಫಿಲ್ಲರ್ ಹೇಗಿರಬೇಕು?

* ಇಂದಿನ ಮಾರುಕಟ್ಟೆಯಲ್ಲಿ ಬಳಕೆಯಲ್ಲಿರುವ ಬಹುತೇಕ ಫಿಲ್ಲರ್ ಗಳು ಶಾಶ್ವತವಲ್ಲ. ಹಾಗಾಗಿ ಈ ಚಿಕಿತ್ಸೆಯನ್ನು ಕಾಲ ಕಾಲಕ್ಕೆ ಮತ್ತೆ ಮತ್ತೆ



ಮಾಡಿಸಿಕೊಳ್ಳುತ್ತಿರಬೇಕು.

* ನಮ್ಮ ಮನಸ್ಸಿನಲ್ಲಿರುವ ಚಿತ್ರದಂತೆಯೇ ಚಿಕಿತ್ಸೆಯ ಪರಿಣಾಮ ಸಿಗದಿರಬಹುದು.

* ಮುಖದ ಇತರೆ ಭಾಗಗಳಲ್ಲಿ ವಯಸ್ಸಾಗುವುದನ್ನು ತಡೆಯಲಾಗುವುದಿಲ್ಲ.

* ಶಾಶ್ವತವಾಗಿ ಉಳಿಯಬಲ್ಲ ಫಿಲ್ಲರ್ ಗಳಿಂದ ಹಲವು ಹಾನಿಗಳಾಗಿವೆ. ಮುಖದ ಅಂದ ಹೆಚ್ಚುವ ಬದಲು ಮುಖ ವಿಕಾರವಾದ ಉದಾಹರಣೆಗಳಿವೆ. ಅವುಗಳಿಂದ ದೂರವಿರುವುದು ಒಳಿತು.

* ಅಶಾಶ್ವತ ಫಿಲ್ಲರ್‌ಗಳು ಕೆಲವು/ಹಲವು ತಿಂಗಳಿಗಿಂತ ಹೆಚ್ಚು ಕಾಲ ತುಟಿಗಳಲ್ಲಿ ಉಳಿಯುವುದಿಲ್ಲ, ಹಾಗಾಗಿ ಅವುಗಳ ಪರಿಣಾಮಗಳಿಗೆ ಮಿತಿಯಿದೆ. ಹಾಗೆಯೇ ಹಾನಿಗೂ ಮಿತಿಯಿದೆ. ಅಲ್ಲದೆ ಈ ಚಿಕಿತ್ಸೆ ದುಬಾರಿ.


